ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ ಭಾಲ್ಕಿ

ಸಿ. ಸಿ. ಸಂಖ್ಯೆ: 246/2020

ಚಾಸಾ-01 ಫ್ರಾಸಾ-07

ದಿನಾಂಕ:08-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು : ಭಾಗವತ

ತಂದೆ ಹೆಸರು : ಮಾಣಿಕರಾವ

ವಯಸ್ಸು : 41 ವರ್ಷ

ಉದ್ಯೋಗ : ಪೋಲಿಸ ಪೇದೆ

ವಾಸಸ್ಥಳ : ಹೂಲಸೂರ

ಸಾಕ್ಷಿ ವಿಚಾರಣೆ: ಸ ಸ ಅ ರವರಿಂದ:

ನಾನು 2011 ರಿಂದ 2018 ರವರೆಗೆ ಭಾಲ್ಕಿ ನಗರ ಪೋಲಿಸ ಠಾಣೆಯಲ್ಲಿ ನಾನು ಪೊಲೀಸ ಪೇದೆ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 30-09-2015 ರಂದು ಮಧ್ಯಾಹ್ನ 12-30 ಕ್ಕೆ ಠಾಣೆಯಲ್ಲಿ ಎಸ್.ಎಚ್.ಓ. ರವರಾದ ಚಾಸಾ-12 ರವರಿಗೆ ದೂರನ್ನು ನೀಡಿರುತ್ತೇನೆ. ಮಧ್ಯಾಹ್ನ 12-30 ಕ್ಕೆ ಬಾಲ್ಕಿಯ ಗಾಂಧಿ ವೃತ್ತದಲ್ಲಿ ಚಾಸಾ-10 ಮತ್ತು 11 ರವರ ನೇತ್ರತ್ವದಲ್ಲಿ ಸುಮಾರು 500-600 ಜನರು ಸೇರಿಕೊಂಡು ಅಂಗಡಿ ಮತ್ತು ಮುಗ್ಗಟ್ಟುಗಳನ್ನು ಒತ್ತಾಯ ಪೂರ್ವಕವಾಗಿ ಬಂದ ಮಾಡಿಸುತಿದ್ದರು.

ನಾನು ಮತ್ತು ಚಾಸಾ-6 ರವರು, ಚಾಸಾ-9 ರವರು, ಚಾಸಾ-8 ರವರು, ಚಾಸಾ-7 ರವರು, ಚಾಸಾ-4 ರವರು, ಚಾಸಾ-5 ರವರು ಎಲ್ಲರೂ ಸೇರಿ ಗಸ್ತು ಕರ್ತವ್ಯ ಮಾಡುವಾಗ ಮೇಲೆ ಹೇಳಿದ ವ್ಯಕ್ತಿಗಳು ಸಮಾಜದಲ್ಲಿ ಶಾಂತಿ ಕದಡುವ ಉದ್ದೇಶದಿಂದ ಮೇಲೆ ಹೇಳಿದಂತೆ ಅಂಗಡಿ ಮುಗ್ಗಟ್ಟುಗಳನ್ನು ಬಂದ ಮಾಡಿಸುತಿದ್ದರು.

ಆ ಬಗ್ಗೆ ನಾವು ಮಾಹಿತಿ ಕಲೆ ಹಾಕಿದಾಗ ದಿನಾಂಕ 29-09-2015 ರಂದು ಮಧ್ಯ ರಾತ್ರಿ ಯಾರೋ ಕಿಡಿಗೆಡಿಗಳು ಭಾಲ್ಕಿ ಚನ್ನಬಸವಾಶ್ರಮದ ಹಿಂದೆ ಇದ್ದ ಕೆರೆಯ ಖುಲ್ಲಾ ಜಾಗದಲ್ಲಿ ಬುದ್ದನ ಮೂರ್ತಿಯನ್ನು ಕೂಡಿಸಿದ್ದಾರೆ ಎಂಬ ಮಾಹಿತಿ ಗೊತ್ತಾಯಿತು. ಸದರಿ ಮೂರ್ತಿಯನ್ನು ಸದರಿ ಸ್ಥಳದಲ್ಲಿ ಕೂಡಿಸಿದ್ದ ವಿಚಾರವಾಗಿ ಗಾಂಧಿ ಚೌಕದಲ್ಲಿ ಅಷ್ಟೊಂದು ಜನರು ಸೇರಿ ಅಂಗಡಿ ಮುಗ್ಗಟ್ಟುಗಳನ್ನು ಬಂದ ಮಾಡುತಿದ್ದಾರೆ ಎಂಬ ವಿಷಯ ಗೊತ್ತಾಯಿತು. ಆ ರೀತಿ ವಿಷಯ ಗೋತ್ತಾದ ನಂತರ ಗಾಂಧಿ ಚೌಕದಲ್ಲಿ ಸೇರಿದ ಜನರು ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ ಉಂಟು ಮಾಡುತ್ತಾರೆ ಮತ್ತು ಅಶಾಂತಿ ಗಲಭೆ ಸೃಷ್ಟಿ ಮಾಡುತ್ತಾರೆ ಎಂಬ ಮುಂಜಾಗ್ರತಾ ಕ್ರಮವಾಗಿ ಈ ಪ್ರಕರಣದ ಆರೋಪಿತರ ವಿರುದ್ದ ನಾನು ಠಾಣೆಗೆ ದೂರನ್ನು ನೀಡಿರುತ್ತೇನೆ.

ನಾನು ನೀಡಿದ ದೂರು ನಿ.ಪಿ.2 ರಂತೆ ಇದ್ದು, ಸಾಕ್ಷಿಯ ಸಹಿಯನ್ನುನಿ.ಪಿ.2(ಬಿ) ಎಂದು ಗುರುತಿಸಲಾಯಿತು.

ನಮ್ಮ ಗಸ್ತು ವಾಹನದ ಮೇಲೆ ವಿಡಿಯೋ ಕ್ಯಾಮರಾ ಇತ್ತು ಸದರಿ ವಿಡಿಯೋ ಕ್ಯಾಮರಾದಲ್ಲಿ ಯಾವ ಯಾವ ವ್ಯಕ್ತಿಗಳು ಆ ದಿನ ದಾಂಧಲೆ ಉಂಟು ಮಾಡುತಿದ್ದರು ಎಂಬ ಬಗ್ಗೆ ಖಚಿತಪಡಿಸಿಕೊಂಡು ಹಾಗೂ ಅವರ ಹೆಸರುಗಳನ್ನು ಖಚಿತಪಡಿಸಿಕೊಂಡ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುತ್ತೇನೆ.

ಆ ದಿನ ದಾಂಧಲೆ ಉಂಟು ಮಾಡುತ್ತಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಆರೋಪಿ ನಂ.7, 8, 15, 18, 19, 21, 23 ಚ, 24 ಮತ್ತು 27 ರವರು ಹಾಜರಿದ್ದು ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಉಳಿದ ಆರೋಪಿತರು ಗೈರು ಹಾಜರಿದ್ದು ಅವರನ್ನು ಗುರುತಿಸುವ ಬಗ್ಗೆ ಅವರ ಪರ ವಕೀಲರಿಂದ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲು: 6, 8, 9, 22, 29 ಮತ್ತು 31 ನೇ ಆರೋಪಿತರ ಪರ ಶ್ರೀ.ಯು.ಸಿ.ಡಬ್ಲ್ಯೂ. ವಕೀಲರಿಂದಃ

ಆ ದಿನ ನಾನು ಕರ್ತವ್ಯದ ಮೇಲೆ ಇದ್ದೆ ಎಂಬ ಬಗ್ಗೆ ತನಿಖಾಧಿಕಾರಿಗೆ ದಾಖಲೆ ನೀಡಿದ್ದಿರಾ ಎಂದರೆ ಸಾಕ್ಷಿಯು ಎಸ್.ಎಚ್.ಓ. ರವರೆ ತನ್ನನ್ನು ಕರ್ತವ್ಯಕ್ಕೆ ನೇಮಿಸಿದ್ದರು ಎನ್ನುತ್ತಾರೆ. ಆ ದಿನ ಕರ್ತವ್ಯಕ್ಕೆ ನೇಮಿಸಿದ ಕುರಿತು ರಜೀಸ್ಟರನಲ್ಲಿ ನಮೂದಿಸಿರುತ್ತಾರೆ. ಸದರಿ ರಜೀಸ್ಟರನಲ್ಲಿ ನಾನು ಆ ಕುರಿತು ಸಹಿ ಮಾಡಿಲ್ಲ. ಸದರಿ ರಜೀಸ್ಟರನ್ನು ನಾನು ಇಲ್ಲಿಯವರೆಗೆ ನೋಡಿಲ್ಲ.

ಗಾಂಧಿ ಚೌಕನಲ್ಲಿ ನಮ್ಮ ಠಾಣೆಯ ಖಾಯಂ ಚೆಕ ಪೋಸ್ಟ ಇದೆ ಎಂದರೆ ಸರಿ. ಅಲ್ಲಿ ಯಾವತ್ತು ಸಹ ಇಬ್ಬರು ಪೊಲೀಸರು ಇರುತ್ತಾರೆ ಎಂದರೆ ಸರಿ. ಸದರಿ ಪೊಲೀಸರು ಆ ದಿನ ನಮ್ಮ ಠಾಣೆಗೆ ಗಾಂಧಿ ಚೌಕನಲ್ಲಿ ಜನ ಸೇರುತಿದ್ದಾರೆ ಮತ್ತು ದೊಂಬಿ ಉಂಟು ಮಾಡುತ್ತಾರೆ ಎಂಬ ಸಾಧ್ಯತೆ ಇರುತ್ತದೆ ಎಂಬ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ.

ಗಾಂಧಿ ಚೌಕನಲ್ಲಿ ಸೇರಿದ ಜನರು ಯಾರ ಅಂಗಡಿ ಮುಗ್ಗಟ್ಟುಗಳನ್ನು ಬಂದ ಮಾಡಿದರು ಮತ್ತು ಅವರ ಪೈಕಿ ಒಬ್ಬರ ಹೆಸರನ್ನಾದರು ಹೇಳಬಲ್ಲಿರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆ ದಿನ ಗಾಂಧಿ ಚೌಕನಲ್ಲಿ ಯಾವುದೇ ಜನರು ಸೇರಿಲ್ಲ, ಯಾರ ಅಂಗಡಿ ಮುಗ್ಗಟ್ಟುಗಳನ್ನು ಸಹ ಬಂದ ಮಾಡಿಸಲು ಪ್ರಯತ್ನ ಪಟ್ಟಿಲ್ಲ, ಯಾವುದೇ ಘಟನೆ ನಡೆದಿಲ್ಲ ಹಾಗೂ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ದೂರನ್ನು ನಾನು ಟೈಪ ಮಾಡಿಸಿ ಕೊಟ್ಟಿರುತ್ತೇನೆ. ಅದನ್ನು ರೈಟರ ಟೈಪ ಮಾಡಿರುತ್ತಾರೆ. ದೂರಿಗೆ ಮಾಹಿತಿ ನಾನೇ ನೀಡಿದ್ದೇನೆ. ನಾನು ಠಾಣೆಗೆ ಮಧ್ಯಾಹ್ನ 01-30 ಕ್ಕೆ ಹೋಗಿರುತ್ತೇನೆ. ದೂರನ್ನು ಟೈಪ ಮಾಡಲು ಸುಮಾರು 10-15 ನಿಮಿಷ ಹಿಡಿಯಿತು. ಸದರಿ ದೂರನ್ನು ನೀಡುವ ಪೂರ್ವದಲ್ಲಿ ನಮ್ಮ ವಾಹನಕ್ಕೆ ಅಳವಡಿಸಿರುವ ವಿಡಿಯೋ ಕ್ಯಾಮರಾವನ್ನು ಪರಿಶೀಲನೆ ಮಾಡಿ ಆ ನಂತರ ದೂರು ನೀಡಿದ್ದೇನೆ. ನಿಮ್ಮ ವಾಹನಕ್ಕೆ ಅಳವಡಿಸಿರುವ ವಿಡಿಯೋ ಕ್ಯಾಮರಾದಲ್ಲಿ ವಿಡಿಯೋ ಅಥವಾ ಭಾವಚಿತ್ರ ಸಂಗ್ರಹಿಸಲು ಚಿಪ್ ಇತ್ತೆ ಅಥವಾ ರೀಲ ಇತ್ತೆ ಎಂದರೆ ಸಾಕ್ಷಿಯು ಸದರಿ ಕ್ಯಾಮರಾ ನೇರವಾಗಿ ಬೀದರ ಪೊಲೀಸ ಅಧೀಕ್ಷಕರ ಕಛೇರಿಗೆ ಸಂಪರ್ಕ ಆಗಿರುತ್ತದೆ ಮತ್ತು ಸದರಿ ಪೊಲೀಸ ಅಧೀಕ್ಷಕರ ಕಛೇರಿಯವರು ಆ ದಿನ ಆದ ಘಟನೆಯ ವಿಡಿಯೋವನ್ನು ನಮ್ಮ ಠಾಣೆಗೆ ರಿಡಾಯಿರೇಕ್ಟ ಮಾಡಿರುತ್ತಾರೆ ಎನ್ನುತ್ತಾರೆ. ಮಾನ್ಯ ಪೊಲೀಸ ಅಧೀಕ್ಷಕರು ಘಟನೆಯ ಭಾವಚಿತ್ರಗಳನ್ನು ನಮ್ಮ ಠಾಣೆಗೆ ಕಳುಹಿಸಿ ಎಂದು ಹೇಳಿದ್ದರಿಂದ ಪೊಲೀಸರ ಅಧೀಕ್ಷರು ಕಛೇರಿಯವರು ಸದರಿ ಬಾವಚಿತ್ರಗಳನ್ನು ನಮ್ಮ ಠಾಣೆಗೆ ರೀಡಾಯಿರೆಕ್ಟ ಮಾಡಿರುತ್ತಾರೆ. ಮಾನ್ಯ ಪೊಲೀಸ ಅಧೀಕ್ಷಕರು ಘಟನಾ ಸ್ಥಳದಲ್ಲಿಯೇ ಇದ್ದು ಆ ರೀತಿ ಹೇಳಿದರೋ ಅಥವಾ ಬೀದರ ಪೊಲೀಸರ ಅಧೀಕ್ಷಕರ ಕಛೇರಿಗೆ ಹೋಗಿ ಆ ರೀತಿ ಹೇಳಿದರು ಎಂದರೆ ಸಾಕ್ಷಿಯು ಈಗ ಆ ಬಗ್ಗೆ ಅಷ್ಟೊಂದು ನೆನಪು ಇಲ್ಲ ಎನ್ನುತ್ತಾರೆ.

ಘಟನಾ ಜಾಗಕ್ಕೆ ಮಾನ್ಯ ಪೊಲೀಸ ಅಧೀಕ್ಷಕರು ಯಾವಾಗ ಬಂದರು ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ಜನರು ಸೇರಿರುವದನ್ನು ನೋಡಿ ಬಂದರು. ಮಾನ್ಯ ಪೊಲೀಸ ಅಧೀಕ್ಷಕರು ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ನಾನು ದೂರನ್ನು ನೀಡಲು ಠಾಣೆಗೆ ಹೋಗಿದ್ದೆ. ಮಾನ್ಯ ಪೊಲೀಸ ಅಧೀಕ್ಷಕರು ಘಟನಾ ಸ್ಥಳಕ್ಕೆ ಮಧ್ಯಾಹ್ನ 01-00 ಗಂಟೆಗೆ ಬಂದರು. ಘಟನಾ ಸ್ಥಳದಲ್ಲಿ ನಾನು ಮಧ್ಯಾಹ್ನ 12-00 ರಿಂದ 12-20 ರವರೆಗೆ ಇದ್ದೆ. 12-20 ರ ನಂತರ ನಾನು ಠಾಣೆಗೆ ಹೋದೆ. ನೀವು ಎಷ್ಟು ಭಾವಚಿತ್ರಗಳನ್ನು ನೋಡಿದ್ದಿರಾ ಎಂದರೆ ಸಾಕ್ಷಿ ಏಣಿಕೆ ಮಾಡಿಲ್ಲ ಎನ್ನುತ್ತಾರೆ. ಆ ದಿನ ಯಾವುದೇ ಘಟನೆ ಆಗಿಲ್ಲ, ಯಾವುದೇ ಆರೋಪಿತರು ಹಾಗೂ ಇನ್ನಿತರ ಜನರು ಸೇರಿಲ್ಲ, ಯಾವುದೇ ಅಂಗಡಿ ಮುಗ್ಗಟ್ಟುಗಳನ್ನು ಬಂದ ಮಾಡಿಸಲು ಪ್ರಯತ್ನ ಪಟ್ಟಿಲ್ಲ, ರಾಜಕೀಯ ದ್ವೇಶದಿಂದ ಮತ್ತು ನಮ್ಮ ಮೇಲಾಧಿಕಾರಿಗಳ ಒತ್ತಾಯದಿಂದ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಉಳಿದ ಆರೋಪಿತರ ಪರ ಅವರ ವಕೀಲರು ಮೇಲಿ ಪಾಟೀ ಸವಾಲನ್ನು ಕೋರಿದ್ದರಿಂದ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಜೆ. ಎಮ್. ಎಫ್. ಸಿ,
ಭಾಲ್ಕಿ